ಪರಿಚಯವಾದದ್ದು ಚಿತ್ತಾಲರ ಸಾನಿಧ್ಯದಲ್ಲಿ. ದೇವನೂರ ಮಹಾದೇವರ ರೂಪಕ ಪ್ರಪಂಚ, ಶಿವರಾಮ ಕಾರಂತ ಮತ್ತು ಮಾಸ್ತಿಯವರ ನಿರೂಪಣಾ ತಂತ್ರ ಹಾಗೂ ಅವರು ಚಿತ್ರಿಸಿದ ಘನವಂತ ಪಾತ್ರಗಳು ನನ್ನ ಕಥಾಜಗತ್ತಿನ ದೀಪ ಮತ್ತು ಕನ್ನಡಿಯಾದವು.

**◆ 'ಅಧೋಮುಖ'ದಲ್ಲಿ ಇರುವುದೆಲ್ಲ ನಿಮ್ಮ ಆರಂಭಿಕ ಕತೆಗಳೇ ಅಲ್ಲವೆ? ಈಗ ಹಿಂತಿರುಗಿ ನೋಡಿದಾಗ ಆ ಕತೆಗಳ ಬಗ್ಗೆ ಏನನಿಸುತ್ತದೆ?**

ಅವುಗಳನ್ನು ಒಂದು ವಿಲಕ್ಷಣ ಕಚ್ಚಾ ಮುಗ್ಧತೆಯಲ್ಲಿ ನಿರರ್ಗಳವಾಗಿ ಬರೆದಿದ್ದೇನೆ ಎಂದನಿಸುತ್ತದೆ. ಮನುಷ್ಯನ ಅಂತಃಸತ್ವದ ಸ್ವಾತಂತ್ರ್ಯವನ್ನು ಸಂಪ್ರದಾಯದ ಹೆಸರಿನಲ್ಲಿ ಹತ್ತಿಕ್ಕುವ ಜೀವವಿರೋಧಿ ಹಿತಾಸಕ್ತಿಗಳನ್ನು, ವ್ಯವಸ್ಥೆಗಳನ್ನು ಪ್ರತಿರೋಧಿಸುವ ಆರಂಭಿಕ ಕತೆಗಳು ಕೌಟುಂಬಿಕ ಚೌಕಟ್ಟಿನೊಳಗಿನ ದಾಂಪತ್ಯ ಜೀವನ ಅಸಫಲವಾದಾಗ ವಿವಾಹೋತ್ತರ ಸಂಬಂಧಗಳಲ್ಲಿ ಲೈಂಗಿಕ ಸಾರ್ಥಕತೆಯನ್ನು ಫಲಿಸಿಕೊಳ್ಳುವ ಚಿತ್ರಗಳನ್ನು ನಿರೂಪಿಸುತ್ತವೆ ಎಂದುಕೊಂಡಿದ್ದೇನೆ.

**◆ ಇಲ್ಲಿಂದ ಮುಂದಿನ ಕತೆಗಳು 'ಅಧೋಮುಖ'ದ ಕತೆಗಳಿಗಿಂತ ಭಿನ್ನವಾದವು ಅಲ್ಲವೆ? ಅವುಗಳ ಹಿಂಭಿತ್ತಿ ಇನ್ನೂ ವಿಸ್ತಾರವಾದದ್ದು.**

ಹೌದು. ಮನುಷ್ಯ ಮತ್ತು ಭೂಮಿಯ ಪವಿತ್ರ ಸಂಬಂಧ ಮುರಿದು ಬಿದ್ದು ಪಡುವ ಸಂಕಟಗಳು, ಸ್ಥಾನಭ್ರಷ್ಟತೆಯನ್ನು ವಿರೋಧಿಸುತ್ತ ಜನಿಸಿದ ಜಾಗದಲ್ಲೆ ತನ್ನ ದೈವವನ್ನು ಜಾಗ್ರತಗೊಳಿಸಿಕೊಳ್ಳಲು ಹೋರಾಡುವವರು, ಲಿಖಿತ ಇತಿಹಾಸದಿಂದ ಹೊರಗೆ ತಳಲ್ಪಟ್ಟು ಆಧುನಿಕತೆಯಿಂದ ಅತಂತ್ರರಾದವರು, ವ್ಯಕ್ತಿಗತ ವಿಸ್ಮೃತಿಯ ಜೊತೆಗೆ ಇಡೀ ಸಮುದಾಯಕ್ಕೆ ಶಾಪದಂತೆ ತಟ್ಟುವ

> ಕತೆಗಾರನ ಕೆಲಸ ಕಾಣಿಸುವುದಷ್ಟೇ. ತಿಳಿವಳಿಕೆಗೆ ಅಗತ್ಯವಾದ ನೆರವು ನೀಡುವುದೇ ಹೊರತು ತೀರ್ಪು ನೀಡುವುದಲ್ಲ; ಕಥಾವಸ್ತು ನಿರೂಪಣೆಯಲ್ಲಿ ನಿಜವಾಗುವ ಮಾಂತ್ರಿಕತೆಯನ್ನು ಸಾಧಿಸುವುದು ಅಗತ್ಯ.

